# ರಾಜ್ಯ ನಗರಾಭಿವೃದ್ಧಿ ಸಂಸ್ಥೆ

ಆಡಳಿತ ತರಬೇತಿ ಸಂಸ್ಥೆ ಆವರಣ ಲಲಿತ ಮಹಲ್ ರಸ್ತೆ, ಮೈಸೂರು-570 011

**Phone No: 0821-2520116, 163, Fax No;0821-2520164**

**e-mail: directorsiud@gmail.com, website: www.siudmysore.gov.in**


ಸಂ: ರಾ.ನ.ಸಂ/ಸಿಬ್ಬಂದಿ/ವಿವ-01/2017-18 ದಿನಾಂಕ: 03.05.2017

## ಸಭಾ ನಡವಳಿ

ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು Housekeeping Services and maintenance of Gardens Surrounding the buildings ಟೆಂಡರ್‌ನ ಪ್ರಿ-ಬಿಡ್ ಸಭೆಯನ್ನು ದಿನಾಂಕ 03.05.2017 ರಂದು ಬೆಳಗ್ಗೆ 11.30ಕ್ಕೆ ಕಛೇರಿಯ ಕಮಿಟಿಹಾಲ್‌ನಲ್ಲಿ ಹಮ್ಮಿಕೊಂಡಿದ್ದರ ಸಭಾ ನಡವಳಿ.

ಸಭೆಯ ಪ್ರಾರಂಭದಲ್ಲಿ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದವರನ್ನು ಸ್ವಾಗತಿಸಿದರು

### ಸಭೆಯಲ್ಲಿ ಭಾಗವಹಿಸಿದ ಸಮಿತಿಯ ಸದಸ್ಯರ ವಿವರ.

1. ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ - ಅಧ್ಯಕ್ಷರು
2. ನಿರ್ದೇಶಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ - ಸದಸ್ಯರು
3. ಉಪ ನಿರ್ದೇಶಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ - ಸದಸ್ಯರು
4. ಉಪ ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ - ಸದಸ್ಯ ಕಾರ್ಯದರ್ಶಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ - ಸದಸ್ಯರು

### ಸಭೆಯಲ್ಲಿ ಭಾಗವಹಿಸಿದ ಬಿಡ್‌ದಾರರು/ಟೆಂಡರ್‌ದಾರರ ವಿವರ.

1. ಮೇ ಪನೋರಮ ಎಂಟರ್‌ಪ್ರೈಸಸ್, # 184/ಸಿ, ಶೇಷಾದ್ರಿಪುರಂ, ಬೆಂಗಳೂರು ರವರ ಪ್ರತಿನಿಧಿಗಳು (ಶ್ರೀ ವಿನೋದ್ ರೆಡ್ಡಿ ಮತ್ತು ಶ್ರೀ ಉಬೇದ್ ಉಲ್ಲಾ)

➢ ಸಭೆಯಲ್ಲಿ ಹಾಜರಿದ್ದ **ಮೇ॥ ಪನೋರಮ ಎಂಟರ್‌ಪ್ರೈಸಸ್, ಬೆಂಗಳೂರು ರವರ ಪ್ರತಿನಿಧಿಯವರು** ಹೌಸ್‌ಕೀಪಿಂಗ್/ಗಾರ್ಡ್‌ನ್ ನಿರ್ವಹಣೆಯ ಸಿಬ್ಬಂದಿಗಳಿಗೆ ಕೇಂದ್ರ ಸರ್ಕಾರ ನಿಗಧಿಪಡಿಸುವ ವೇತನ (Wage) ಪಾವತಿಸಲಾಗುವುದೇ ಅಥವಾ ರಾಜ್ಯ ಸರ್ಕಾರ ನಿಗಧಿಪಡಿಸುವ ವೇತನ (Wage) ಪಾವತಿಸಲಾಗುವುದೇ ಎಂದು ಕೇಳಿದರು.

- ಸಭೆಯಲ್ಲಿ ಹಾಜರಿದ್ದ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕರು ರವರು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯು ನಿಗಧಿಪಡಿಸುವ ಕನಿಷ್ಠ ವೇತನವನ್ನು ಪಾವತಿಸಲಾಗುವುದೆಂದು ತಿಳಿಸಿದರು.

- **<u>ಮೇ॥ ಪನೋರಮ ಎಂಟರ್‌ಪ್ರೈಸಸ್, ಬೆಂಗಳೂರು ರವರ ಪ್ರತಿನಿಧಿಯವರು</u>** ಹೌಸ್‌ಕೀಪಿಂಗ್‌ಗೆ ಸ್ವಚ್ಚತ ಸಾಮಾಗ್ರಿಗಳನ್ನು ನಾವೇ ತಂದು ನಿರ್ವಹಿಸಬೇಕೆ? ಎಂದು ಕೇಳಿದರು.
  - ಸಂಸ್ಥೆಯ ಉಪ ನಿರ್ದೇಶಕರು ಹಾಗೂ ಪರಿಪಾಲಕರು ಸ್ವಚ್ಚತ ಸಾಮಾಗ್ರಿಗಳನ್ನು ಸಂಸ್ಥೆಯಿಂದಲೇ ನೀಡಲಾಗುವುದು. ನೀವು ಬೇಡಿಕೆಯಿರುವ ನುರಿತ ಅನುಭವವಿರುವ ನೌಕರರು/ಸಿಬ್ಬಂದಿಗಳನ್ನು ಮಾತ್ರ ಒದಗಿಸುವುದು ಹಾಗೂ ಸದರಿ ಕಾರ್ಮಿಕರಿಗೆ ಸಮವಸ್ತ್ರಗಳನ್ನು ನೀಡಬೇಕಾಗಿರುತ್ತದೆ ಎಂದು ತಿಳಿಸಿದರು ಅಲ್ಲದೇ ಸಭೆಯಲ್ಲಿ ಇದ್ದ ಸದಸ್ಯರುಗಳು ಭಾಗವಹಿಸಿದ ಬಿಡ್‌ದಾರರಿಗೆ ಈ ಕೆಳಕಂಡ ಮಾಹಿತಿಯನ್ನು ನೀಡಿದರು.
  - ವಿವಿಧ ವರ್ಗದ ಸಿಬ್ಬಂದಿಗಳನ್ನು ಸಂಸ್ಥೆಗೆ ಬೇಕಾಗಿರುವುದರಿಂದ ಕೌಶಲ್ಯವಿರುವ/ಅನುಭವವಿರುವ ಸಿಬ್ಬಂದಿಗಳನ್ನು ಒದಗಿಸಬೇಕು ಎಂದು ಸೂಚಿಸಿದರು.
  - ಸಂಸ್ಥೆಯ ನಿರ್ದೇಶಕರು ಹಾಗೂ ಸಮಿತಿಯ ಅಧ್ಯಕ್ಷರು ಮಾತನಾಡಿ ಮುಖ್ಯವಾಗಿ Performa-A ಯನ್ನು ಟೆಂಡರ್ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು ಹಾಗೂ ಇ.ಎಂ.ಡಿ ಮೊತ್ತವನ್ನು ಸಹ ಕಟ್ಟಿರಬೇಕು ಎಂದು ತಿಳಿಸಿದರು.
  - ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಶಸ್ವಿ ಟೆಂಡರ್‌ದಾರರು ಹೌಸ್‌ಕೀಪಿಂಗ್ ಮತ್ತು ಗಾರ್ಡ್ ನಿರ್ವಹಣೆಗೆ ಒದಗಿಸುವ ಸಿಬ್ಬಂದಿಗಳಿಗೆ ಒಂದು ದಿನದ ಪ್ರಾಯೋಗಿಕವಾಗಿ ಸಂಸ್ಥೆಯ ನಿಯಮಾವಳಿ ಮತ್ತು ಕೆಲಸ ನಿರ್ವಹಣೆ ಬಗ್ಗೆ ತರಬೇತಿ/ಮಾಹಿತಿಯನ್ನು ನೀಡಲಾಗುವುದು ಅದರಂತೆ ಟೆಂಡರ್ ಮುಕ್ತಾಯಗೊಳ್ಳುವ ವರೆಗೆ ಕಾರ್ಯನಿರ್ವಹಿಸಿಕೊಂಡು ಹೋಗತಕ್ಕದ್ದು ಎಂದು ತಿಳಿಸಲಾಯಿತು.

ಭಾಗವಹಿಸಿದ ಬಿಡ್‌ದಾರರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಸಂಸ್ಥೆಯ ವೆಬ್‌ಸೈಟ್ / ಕಛೇರಿ ಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿ ಭಾಗವಹಸಿದ ಎಲ್ಲರಿಗೂ ವಂದಿಸಿ ಪ್ರಿ-ಬಿಡ್ ಸಭೆಯನ್ನು ಮುಕ್ತಾಯಗೊಳಿಸಿದರು.

ನಿರ್ದೇಶಕರು
ರಾಜ್ಯ ನಗರಾಭಿವೃದ್ಧಿ ಸಂಸ್ಥೆ
ಮೈಸೂರು.